

ಭ್ರಮಣಧ್ವನಿ ಎನ್ನುತ್ತಾರೆ). 'ಪ್ರೇಮಲೋಕ' ಸಿನಿಮಾದಲ್ಲಿ ಹಿರೋಯಿನ್ ಜೂಹಿ ಚಾವ್ಲಾಗೆ ಅವಳ ಕಾಲೇಜ್ ಪ್ರಿನ್ಸಿಪಾಲ್ ಪಾತ್ರದಲ್ಲಿದ್ದ ಟೈಗರ್ ಪ್ರಭಾಕರ್, 'ನೆಲ ನೋಡ್ಕೊಂಡು ಹೋಗಬೇಕು ನೆಲ ನೋಡ್ಕೊಂಡು ಬರಬೇಕು' ಅಂತ ಕಟ್ಟುನಿಟ್ಟಾಗಿ ಆರ್ಡರ್ ಮಾಡಿದ್ರು. ಆ ಹಾಡಿಗೆ ಈಗಿನ ಕಾಲದವರೇನಾದರೂ ಸಾಹಿತ್ಯ ಬರೆದಿದ್ದರೆ ಅದು ಬಹುಶಃ 'ಮೊಬೈಲ್ ನೋಡ್ಕೊಂಡು ಹೋಗಬೇಕು ಮೊಬೈಲ್ ನೋಡ್ಕೊಂಡು ಬರಬೇಕು' ಅಂತ ಇರ್ತಿತ್ತು.

ಮೊಬೈಲ್‌ನಲ್ಲಿ ತಲೆ ತಗ್ಗಿಸಿ ಅದರಲ್ಲಿಯೇ ಮುಳುಗುವುದಕ್ಕೆ ವಯಸ್ಸಿನ ಹಂಗಿಲ್ಲ. ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಎಲ್ಲರನ್ನೂ ತನ್ನ ತೆಕ್ಕೆಗೆ ಎಳೆದುಕೊಳ್ಳುವುದು ಈ ಮೊಬೈಲ್ ಮಾಯಾಜಾಲ.

ಕಾರ್ಟೂನ್‌ಗಳನ್ನು ನೋಡುವ ಪುಟ್ಟ ಕಂದಮ್ಮಗಳು, ಮೊಬೈಲ್ ಗೇಮ್ಸ್ ಆಡುವ ಶಾಲಾ ಮಕ್ಕಳು, ರೀಲ್ಸ್ ನೋಡುವುದರಲ್ಲಿ ಹಾಗೂ ಮಾಡುವುದರಲ್ಲಿ ಮಗ್ನವಾಗಿರುವ ಕಾಲೇಜು ಹುಡುಗ ಹುಡುಗಿಯರು, ಆನ್‌ಲೈನ್ ಶಾಪಿಂಗ್ ಮಾಡುವ, ಒಟಿಟಿಯಲ್ಲಿ ಫಿಲಂ ನೋಡುವ, ವೆಬ್ ಸೀರೀಸ್ ನೋಡುತ್ತಾ ವೆಬ್‌ನಲ್ಲಿ ಸಿಲುಕಿಕೊಂಡಿರುವ ದೊಡ್ಡವರು ಹೀಗೆ ಎಲ್ಲರ ತಲೆ ಮೊಬೈಲ್ ನೋಡುತ್ತಾ ಬಾಗಿಯೇ ಇರುತ್ತದೆ.

ಮೊನ್ನೆ ಒಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಹೋಗಿದ್ದೆ. ರಿಸೆಪ್ಷನ್ ಕೌಂಟರ್‌ನಲ್ಲಿ ಹಣ ಕಟ್ಟಿ 'ಎಷ್ಟು ಪೇಷಂಟ್ಸ್ ಇದ್ದಾರೆ' ಎಂದು ಕೇಳ್ದೆ. ರಿಸೆಪ್ಷನ್ ಕೌಂಟರ್‌ಗೆ ಬೆನ್ನು ಮಾಡಿ ಕುಳಿತ ಎಷ್ಟೊಂದು ಜನರನ್ನು ತೋರಿಸಿ 'ಅವರೆಲ್ಲರೂ ಆದ ಮೇಲೆ ಕೊನೆಗೆ ನಿಮ್ಮ ನಂಬರ್' ಅಂದಳು. ಅವರನ್ನೆಲ್ಲ ಹಿಂದಿನಿಂದ ನೋಡಿದ ನನಗೆ ಸ್ವಲ್ಪ ಗೊಂದಲವಾಯ್ತು. 'ಮೇಡಂ ನನಗೆ ಫಿಸಿಶಿಯನ್ ಹತ್ತಿರ ಅಪಾಯಿಂಟ್ಮೆಂಟ್ ಬೇಕಿತ್ತು, ಆರ್ಥೋಪಿಡಿಶಿಯನ್ ಹತ್ತಿರ ಅಲ್ಲ, ಅವರೆಲ್ಲ ಆರ್ಥೋಪಿಡಿಶಿಯನ್‌ಗೆ ತೋರಿಸಲು ಬಂದವರಲ್ವಾ, ಅಲ್ಲಿ ಕುಳಿತವರೆಲ್ಲರಿಗೂ ಕತ್ತು ಹಿಡ್ಕೊಂಡಿದೆ ಅನಸ್ತಾ ಇದೆ. 10 ನಿಮಿಷದಿಂದ ನೋಡ್ತಾ ಇದೀನಿ. ಅವರಾರೂ ಕತ್ತು ಮೇಲೆತ್ತಿಲ್ಲ, ಆ ಕಡೆಗೆ ಈ ಕಡೆಗೆ ಕತ್ತು ಅಲುಗಾಡಿಸಿಲ್ಲ' ಎಂದೆ.

'ಇಲ್ಲ ಮೇಡಂ. ಅವರೆಲ್ಲರೂ ಫಿಸಿಶಿಯನ್‌ಗೆ ಅಪಾಯಿಂಟ್ಮೆಂಟ್ ತೆಗೆದುಕೊಂಡವರು. ಎಲ್ಲರೂ ಮೊಬೈಲ್ ನೋಡ್ತಾ ಇರೋದ್ರಿಂದ ಕತ್ತು ಬಾಗಿಸಿದ್ದಾರೆ ಅಷ್ಟೇ' ಎಂದಾಗ ಅವರನ್ನೆಲ್ಲಾ ನೋಡಿ 'ಮ್ಯಾನ್ ಇಸ್ ಸೋಷಿಯಲ್ ಎನಿಮಲ್' ಅಲ್ಲ, 'ಮ್ಯಾನ್ ಇಸ್ ಸೋಷಿಯಲ್ ಮೀಡಿಯಾ ಕ್ರೀಚರ್' ಅಂತ ಮನದಲ್ಲೇ ಮರುಗಿದೆ.

ಇನ್ನು ಬಸ್‌ನಲ್ಲಿ, ರೈಲ್ವೆ ಪ್ಲಾಟ್‌ಫಾರಂಗಳಲ್ಲಿ, ಏರ್‌ಪೋರ್ಟ್‌ಗಳಲ್ಲಿ ಕುಳಿತ ಪ್ಯಾಸೆಂಜರ್‌ಗಳು ಪಕ್ಕದಲ್ಲಿ ಕುಳಿತವರ ಜೊತೆ ಮಾತಿಲ್ಲ, ಕಥೆಯಿಲ್ಲ. ಎಲ್ಲರೂ ಮೊಬೈಲ್ ನೋಡುತ್ತಾ ಕುಳಿತ ಭಂಗಿ ನೋಡಿದ್ರೆ ಎಲ್ಲಿ ಇವರೆಲ್ಲ ಹೈಜಾಕ್ ಆಗಿ ಹೈಜಾಕರ್‌ಗಳು ಪ್ಯಾಸೆಂಜರ್‌ಗಳನ್ನು ತಲೆ ಕೆಳಗೆ ಮಾಡಿಸಿ ಕೂಡಿಸಿದ್ದಾರೋ ಎನ್ನುವ ಕಲ್ಪನೆ ಮೂಡದಿರದು. ಬಸ್‌ಗಳಲ್ಲಿ ಮೊದಲೆಲ್ಲ ಟಿಕೆಟ್‌ಗಾಗಿ ಕಂಡಕ್ಟರ್ ಬಂದು ಮೊಬೈಲ್ ವೀಕ್ಷಣೆಗೆ ಡಿಸ್ಟರ್ಬ್ ಮಾಡ್ತಿದ್ದ. ಈಗಂತೂ ಬಸ್ ಪಯಣ ಫ್ರೀ. ಹಾಗಾಗಿ ಒಂದು ಕೈಯಲ್ಲಿ ಮೊಬೈಲ್, ಇನ್ನೊಂದು ಕೈಯಲ್ಲಿ ಆಧಾರ್ ಕಾರ್ಡ್ ಹಿಡಿದು ತಲೆ ಬಗ್ಗಿಸಿ ಕುಳಿತರಾಯ್ತು. ತಮ್ಮ ಸ್ಟಾಪ್ ಬಂದ ಮೇಲೇನೆ ತಲೆ ಮೇಲೆತ್ತೋದು.

ಮನೆಗೆ ಕೊರಿಯರ್ ಕೊಡಲು ಬರುವ ಹುಡುಗರು, ದಿನಸಿ ಸಾಮಾನುಗಳನ್ನು ಹೋಮ್ ಡೆಲಿವರಿ ಮಾಡುವ ಹುಡುಗರಂತೂ ಮೊಬೈಲ್‌ನಲ್ಲಿ ತಲೆ ತಗ್ಗಿಸಿಕೊಂಡೇ ಬಂದು ಮನೆ ಮುಂದೆ ಹಾಕಿದ ರಂಗೋಲಿ ಮೇಲೆಯೇ ನಿಂತು ಬೆಲ್ ಮಾಡ್ತಾರೆ. ಹೇಗೆ ಅರ್ಜುನ ಬಾಣದ ಗುರಿ ಇಟ್ಟಾಗ ವೃಕ್ಷದ ಮೇಲೆ ಕುಳಿತ ಪಕ್ಷಿಯ ಕಣ್ಣು ಮಾತ್ರ ಕಾಣಿಸಿತೋ ಹಾಗೆ ಇವರ ಕಣ್ಣುಗಳು ಕೆಳಗೇ ನೋಡುತ್ತಿದ್ದರೂ ರಂಗೋಲಿ ಕಾಣುವುದಿಲ್ಲ, ಮೊಬೈಲ್ ಮಾತ್ರ ಕಾಣುತ್ತದೆ. ಇವರಿಗೆ ಕಲಿಯುಗದ ಅರ್ಜುನ ಎನ್ನಲಡ್ಡಿಯಿಲ್ಲ. ರಂಗೋಲಿ ತುಳಿದಿದ್ದಕ್ಕೆ ಬೈದರೆ, 'ಏನ್ ಮೇಡಂ ನೆಲದ ಮೇಲೆ ರಂಗೋಲಿ ಹಾಕ್ತಾರಾ?' ಅಂತಾ ನನಗೇ ಪ್ರಶ್ನೆ ಮಾಡೋದೇ! ಏನ್ ಮಾಡೋದು, ನನಗೆ ನೆಲದ ಮೇಲೆ ಬಿಟ್ಟು ಗಾಳಿಯಲ್ಲಿ ರಂಗೋಲಿ ಹಾಕಲು ಬರೋಲ್ಲ. ಹಾಗಾಗಿ ಹಬ್ಬ ಹರಿದಿನಗಳಲ್ಲಿ ಕಲರ್ ರಂಗೋಲಿ ಹಾಕಿದರೆ ಆ ರಂಗೋಲಿ ತೆಗೆದು ಬೇರೆ ರಂಗೋಲಿ ಹಾಕುವವರೆಗೂ ಏನೂ